# ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-560 001.

---

**ನಿಗಮದ ಕೇಂದ್ರ ಕಛೇರಿಯಲ್ಲಿ ಶ್ರೀ ಎ.ಆರ್. ಕೃಷ್ಣಮೂರ್ತಿ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ 12.08.2011 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ 185ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ:**

| | |
|---|---|
| **ಉಪಸ್ಥಿತರು:** | |
| **ಹೆಸರು ಮತ್ತು ಪದನಾಮ** | |
| ಶ್ರೀ ಎ.ಆರ್. ಕೃಷ್ಣಮೂರ್ತಿ | ಮಾನ್ಯ ಅಧ್ಯಕ್ಷರು |
| ಶ್ರೀ ಇ. ವೆಂಕಟಯ್ಯ, ಭಾ.ಆ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| ಶ್ರೀ ಸರ್ಫರಾಜ್ ಖಾನ್, ಕೆ.ಸಿ.ಎ.ಎಸ್., | ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು |
| ಶ್ರೀ ಮುನಿಯಲ್ಲಪ್ಪ<br>ಸರ್ಕಾರದ ಅಪರ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ<br>ಕರ್ನಾಟಕ ಸರ್ಕಾರ | ನಿರ್ದೇಶಕರು |
| **ಅನುಪಸ್ಥಿತರು:** | |
| ಶ್ರೀ ಎಂ.ಎ. ಹುಸೇನ್<br>ಉಪ ಕಾರ್ಯದರ್ಶಿಗಳು<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ<br>ಕರ್ನಾಟಕ ಸರ್ಕಾರ | ಸದಸ್ಯರು |
| ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು<br>ಅಭಿವೃದ್ಧಿ ನಿಗಮ, ನವದೆಹಲಿ<br>ಭಾರತ ಸರ್ಕಾರದ ಪ್ರತಿನಿಧಿ | ಸದಸ್ಯರು |

ಶ್ರೀ ಸರ್ಫರಾಜ್‌ಖಾನ್, ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ಆಗಮಿಸಿದ್ದ ನಿಗಮದ ಮಾನ್ಯ ಅಧ್ಯಕ್ಷರು, ಶ್ರೀ ಇ. ವೆಂಕಟಯ್ಯ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಶ್ರೀ ಮುನಿಯಲ್ಲಪ್ಪ, ಸರ್ಕಾರದ ಅಪರ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರೆಲ್ಲರಿಗೂ ಹಾರ್ಧಿಕ ಸ್ವಾಗತ ಬಯಸಿದರು.

ನಿಗಮದ ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದ ಸಭಾ ಸದಸ್ಯರೆಲ್ಲರನ್ನು ಹಾರ್ಧಿಕವಾಗಿ ಸ್ವಾಗತಿಸಿದರು.

.. 2

ಸಭೆಯ ಕಾರ್ಯಸೂಚಿಯನ್ನು ಚರ್ಚಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

**ವಿಷಯ ಸಂಖ್ಯೆ:1: 2010-11ನೇ ಸಾಲಿನ ವಾರ್ಷಿಕ ಲೆಕ್ಕಪತ್ರಕ್ಕೆ ಅನುಮತಿ ನೀಡುವ ಬಗ್ಗೆ:**

31.03.2011ರ ವರೆಗಿನ ಕರಡು ಅಢಾವೆ ಪತ್ರ ಮತ್ತು 31.03.2011ಕ್ಕೆ ಅಂತ್ಯಗೊಂಡ ಲಾಭ ಮತ್ತು ನಷ್ಟದ ತ:ಖ್ತೆಯನ್ನು ನಿರ್ದೇಶಕರ ಮಂಡಳಿ ಸಭೆ ಮುಂದೆ ಮಂಡಿಸಲಾಯಿತು. ಪರಿಶೀಲನಾ ಸಮಯದಲ್ಲಿ ಪ್ರಧಾನ ಕಾರ್ಯದರ್ಶಿಗಳು ವಸೂಲಾತಿಯನ್ನು ಹೆಚ್ಚಿಸುವ ಬಗ್ಗೆ ತಮ್ಮ ಇಂಗಿತ ವ್ಯಕ್ತಪಡಿಸಿದರು. ವ್ಯವಸ್ಥಾಪಕ ನಿರ್ದೇಶಕರು ವಸೂಲಾತಿಯನ್ನು ಹೆಚ್ಚಿಸುವ ಸಲುವಾಗಿ ತೆಗೆದುಕೊಂಡ ಕ್ರಮವನ್ನು ಸಭೆಯ ಗಮನಕ್ಕೆ ತರುತ್ತಾ ಇನ್ನೂ ಹೆಚ್ಚಿನ ಒತ್ತನ್ನು ಕೊಟ್ಟು ವಸೂಲಾತಿಯಲ್ಲಿ ಗಣನೀಯವಾದ ಪ್ರಗತಿ ಸಾಧಿಸಲಾಗುವುದೆಂದು ತಿಳಿಸಿದರು. ನಿರ್ದೇಶಕರ ಮಂಡಳಿಯು ಪರಿಶೀಲನೆ ಬಳಿಕೆ ಈ ಕೆಳಕಂಡಂತೆ ನಿರ್ಣಯ ಕೈಗೊಂಡಿತು:

1. 31.03.2011ರ ವರೆಗಿನ ಕರಡು ಅಢಾವೆ ಪತ್ರ ಮತ್ತು 31.03.2011ಕ್ಕೆ ಅಂತ್ಯಗೊಂಡ ಲಾಭ ಮತ್ತು ನಷ್ಟದ ತ:ಖ್ತೆಯನ್ನು ಹಾಗೂ ನಗದು ಹರಿವು ಪಟ್ಟಿಯನ್ನು ಅನುಮೋದಿಸಿ, ವ್ಯವಸ್ಥಾಪಕ ನಿರ್ದೇಶಕರು, ಅಧ್ಯಕ್ಷರು/ ಅಥವಾ ನಿಗಮದ ಯಾವುದೇ ಒಬ್ಬ ನಿರ್ದೇಶಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)ರವರೊಂದಿಗೆ 31.03.2011ರ ವರೆಗಿನ ಕರಡು ಅಢಾವೆ ಪತ್ರ ಮತ್ತು 31.03.2011ಕ್ಕೆ ಅಂತ್ಯಗೊಂಡ ಲಾಭ ಮತ್ತು ನಷ್ಟದ ತ:ಖ್ತೆಯನ್ನು ಹಾಗೂ ನಗದು ಹರಿವು ಪಟ್ಟಿಗೆ ನಿರ್ದೇಶಕ ಮಂಡಳಿಯ ಪರವಾಗಿ ಸಹಿ ಮಾಡಿದ ಅಢಾವೆ ಪತ್ರ ಮತ್ತು ಲಾಭ ಮತ್ತು ನಷ್ಟದ ತ:ಖ್ತೆಯನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸಿ ಅದರ ಮೇಲೆ ವರದಿ ಪಡೆಯುವುದೆಂದು ತೀರ್ಮಾನಿಸಲಾಯಿತು.

2. ನಿಗಮದ 36ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 24.09.2011ರಂದು ನಡೆಸಲು ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ 36ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 24.09.2011ರಂದು ಮಧ್ಯಾಹ್ನ 4.00 ಗಂಟೆಗೆ ನಿಗಮದ ನೊಂದಾಯಿತ ಕಛೇರಿಯಲ್ಲಿ ನಡೆಯುವಂತೆ ಕರಡು ನೋಟೀಸ್‌ನ್ನು ಅನುಮೋದಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:2- 2010-11 ಮತ್ತು 2011-12ನೇ ಸಾಲಿನ ಗಂಗಾಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸುವ ಸಂಬಂಧ ಹಣಕಾಸಿನ ಗುರಿಯನ್ನು ನಿಗದಿಪಡಿಸುವ ಬಗ್ಗೆ.**

ಸರ್ಕಾರ ಎಸ್.ಸಿ.ಎಸ್.ಪಿ., ಯಡಿ ಬಿಡುಗಡೆ ಮಾಡಿದ ಹೆಚ್ಚುವರಿ ಅನುದಾನ ರೂ.8.00 ಕೋಟಿಗಳನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಕೊರೆದ ವೈಯಕ್ತಿಕ ನೀರಾವರಿ ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸುವ ಸಲುವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ನಿರ್ದೇಶಕರ ಮಂಡಳಿಗೆ ವಿವರಿಸಿದರು. ನಿರ್ದೇಶಕರ ಮಂಡಳಿಯು ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಿ ಶೀಘ್ರವಾಗಿ ಯೋಜನೆಯ ಅನುಷ್ಠಾನಕ್ಕೆ ಸೂಚಿಸಿತು.

ಗಂಗಾಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳ ವಿದ್ಯುದ್ದೀಕರಣ ಕಾರ್ಯವು ನಿಧಾನ ಗತಿಯಲ್ಲಿ ಸಾಗುತ್ತಿರುವ ಬಗ್ಗೆ ಚರ್ಚಿಸುತ್ತಾ, ಪ್ರಧಾನ ಕಾರ್ಯದರ್ಶಿಗಳು ಹೊರಗುತ್ತಿಗೆ ಆಧಾರದ ಮೇಲೆ ವಿದ್ಯುದ್ದೀಕರಣಗೊಳಿಸುವ ಸಾಧ್ಯತೆಯ ಬಗ್ಗೆ ಸಲಹೆ ನೀಡಿದರು. ನಿರ್ದೇಶಕರ ಮಂಡಳಿಯು ಪ್ರಧಾನ ಕಾರ್ಯದರ್ಶಿಗಳ ಸಲಹೆಗೆ ಸಹಮತಿಸುತ್ತಾ ಪೈಲಟ್ ಪ್ರಾಜೆಕ್ಟ್ ರೀತಿ ರಾಜ್ಯದೆಲ್ಲೆಡೆ 20 ಪ್ರಕರಣಗಳಿಗೆ ಮೀರದಂತೆ ಹೊರ ಗುತ್ತಿಗೆ ಮೂಲಕ ವಿದ್ಯುದ್ದೀಕರಣಗೊಳಿಸಲು ಅನುಮತಿ ನೀಡಿ, ಇದರ ಫಲಿತಾಂಶ ಉತ್ತೇಜಿಸುವಂತಿದ್ದರೆ ಬೇರೆಯವರಿಗೂ ಇದನ್ನು ವಿಸ್ತರಿಸಲು ಮಾರ್ಗದರ್ಶನದೊಂದಿಗೆ ಬರಲು ತೀರ್ಮಾನಿಸಿತು.

**ವಿಷಯ ಸಂಖ್ಯೆ:3– 2010–11ನೇ ಸಾಲಿಗೆ ಹೆಚ್ಚುವರಿ ಕೊಳವೆಬಾವಿಗಳಿಗೆ ಗುರಿ ನಿಗದಿಪಡಿಸಲು ಅನುಮೋದನೆ ನೀಡುವ ಕುರಿತು.**

2010–11ನೇ ಸಾಲಿನಲ್ಲಿ ಸರ್ಕಾರವು ಕ್ರೋಡೀಕೃತ ಅನುದಾನದಲ್ಲಿ ಬಿಡುಗಡೆ ಮಾಡಿದ ರೂ.10.00 ಕೋಟಿಗಳಲ್ಲಿ ಮಾನ್ಯ ಅಧ್ಯಕ್ಷರ ವಿವೇಚನಾ ಕೋಟಾದಡಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು, ಸಂಸದರು, ಶಾಸಕರುಗಳು, ಚುನಾಯಿತ ಜನಪ್ರತಿನಿಧಿಗಳಾದ ಪರ ಮತ್ತು ವಿರೋಧಪಕ್ಷಗಳ ಸದಸ್ಯರು ಮತ್ತು ಅರ್ಹವಾದ ಪ್ರಕರಣಗಳಡಿ ಶಿಫಾರಸ್ಸಾಗಿ ಬಂದಂತವುಗಳಿಗೆ ಹೆಚ್ಚುವರಿ ಕೊಳವೆಬಾವಿ ಕೊರೆಯಲು ಗುರಿ ನಿಗದಿಪಡಿಸಿ ಮಂಜೂರಾತಿ ನೀಡಿರುವುದನ್ನು ನಿರ್ದೇಶಕ ಮಂಡಳಿಯ ಗಮನಕ್ಕೆ ತಂದರು. ನಿರ್ದೇಶಕರ ಮಂಡಳಿಯು ವ್ಯವಸ್ಥಾಪಕ ನಿರ್ದೇಶಕರು 2010–11ನೇ ಸಾಲಿಗೆ ಹೆಚ್ಚುವರಿ ಕೊಳವೆಬಾವಿ ಕೊರೆಯಲು ಗುರಿ ನಿಗದಿಪಡಿಸಿ ಮಂಜೂರಾತಿ ನೀಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

**ಹೆಚ್ಚುವರಿ ವಿಷಯ ಸಂಖ್ಯೆ:1– ಕೋಲಾರ ಜಿಲ್ಲೆಯಲ್ಲಿ ಹೆಚ್ಚುವರಿಯಾಗಿ ಕೊರೆದಿರುವ ಕೊಳವೆಬಾವಿಗಳ ಕುರಿತು.**

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 2010–11ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 28 ಕೊಳವೆಬಾವಿಗಳನ್ನು ಕೊರೆಸಿದ್ದು, ಅವುಗಳ ಮೊತ್ತವನ್ನು ಪಾವತಿಸಲು ಶಿಫಾರಸ್ಸು ಮಾಡಿದ್ದು ಮತ್ತು ಈ 28 ಜನರನ್ನು 2011–12ರ ಸಾಲಿಗೆ ಫಲಾನುಭವಿಗಳೆಂದು ಪರಿಗಣಿಸಲು ಶಾಸಕರು ಪತ್ರ ನೀಡಿರುವುದನ್ನು ನಿರ್ದೇಶಕರ ಮಂಡಳಿಯ ಗಮನಕ್ಕೆ ತಂದಾಗ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕೇಂದ್ರ ಕಛೇರಿಯ ಅಧಿಕಾರಿಗಳಿಂದ ಸ್ಥಳ ತಪಾಸಣೆ ನಡೆಸಿ, ವರದಿ ಸಲ್ಲಿಸಲು ಮಂಡಳಿಯು ತೀರ್ಮಾನಿಸಿತು.

**ಹೆಚ್ಚುವರಿ ವಿಷಯ ಸಂಖ್ಯೆ:2– ದಸರಾ ವಸ್ತು ಪ್ರದರ್ಶನದಲ್ಲಿ ನಿಗಮದ ವತಿಯಿಂದ ಮಳಿಗೆಯನ್ನು ಸ್ಥಾಪಿಸುವ ಬಗ್ಗೆ.**

2010–11ನೇ ಸಾಲಿನ ದಸರಾ ವಸ್ತು ಪ್ರದರ್ಶನದಲ್ಲಿ ನಿಗಮದ ವತಿಯಿಂದ ಮಳಿಗೆಯನ್ನು ಸ್ಥಾಪಿಸಲಾಗಿತ್ತು, ಅದರಂತೆ, ಈ ಸಾಲಿನಲ್ಲೂ ಸಹ ಮಳಿಗೆ ಸ್ಥಾಪಿಸುವ ಬಗ್ಗೆ ನಿರ್ದೇಶಕ ಮಂಡಳಿ

.. 3

ಗಮನಕ್ಕೆ ತಂದಾಗ, 3 ನಿಗಮಗಳು (ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ) ಒಂದೇ ಕಡೆ ಮಳಿಗೆ ತೆರೆಯುವುದು ಮತ್ತು ಇದರ ವೆಚ್ಚವನ್ನು 3 ನಿಗಮಗಳು ಸೇರಿ ಭರಿಸಲು ತೀರ್ಮಾನಿಸಲಾಯಿತು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

(ಎ.ಆರ್. ಕೃಷ್ಣಮೂರ್ತಿ)
ಅಧ್ಯಕ್ಷರು